**ದಿಃ 04-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ಪ್ರತಿವಾದಿ ಪರ ವಕೀಲರವರಿಂದ:**

ಪ್ರತಿವಾದಿ 5 ರವರ ಹೆಸರಿನಲ್ಲಿರುವ ದಾವಾಸ್ವತ್ತಿನ 8 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಗುರುತಿಸಲು ವಾದಿಯ ಪರ ವಕೀಲರು ತಕರಾರು ವ್ಯಕ್ತಪಡಿಸಿದ್ದು, ಸದರಿ ತಕರಾರಿಗೆ ಒಳಪಟ್ಟು ಸದರಿ ಪಹಣಿ ಪತ್ರಿಕೆಗಳನ್ನು ಕ್ರಮವಾಗಿ ನಿಡಿ-2 ರಿಂದ 9 ಎಂದು, ದಾವಾ ಸ್ವತ್ತಿನ 2012-2013 ರಿಂದ 2023-2024 ರ ವರೆಗಿನ 12 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಡಿ-10 ರಿಂದ ನಿಡಿ-21 ಎಂದು, ಹಕ್ಕು ದಾಖಲೆ ಸಂಖ್ಯೆ 2710 ರ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-22 ಎಂದು, ಹಕ್ಕು ದಾಖಲೆ ಸಂಖ್ಯೆ 5143 ರ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-23 ಎಂದು, ಫಾರ್ಮ ನಂಬರ "ಯು" ಇದರ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-24 ಎಂದು, ದಾವಾ ಸ್ವತ್ತಿನ ದಿಃ 01-04-1990 ರಿಂದ ದಿಃ 03-11-2005 ರ ವರೆಗಿನ ಋಣಭಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-25 ಎಂದು, ದಾವಾ ಸ್ವತ್ತಿನ ಕುರಿತು ದಿಃ 01-04-2003 ರಿಂದ ದಿಃ 07-05-2018 ರ ವರೆಗಿನ ಋಣಭಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-26 ಎಂದು, ದಾವಾ ಸ್ವತ್ತಿನ ಕುರಿತು ದಿಃ 24-10-2000 ರಂದು ಆದ ನೋಂದಾಯಿತ ಖರೀದಿ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-27 ಎಂದು, ಹಕ್ಕು ಬದಲಾವಣೆ ಪತ್ರ ಸಂಖ್ಯೆ 300/ಸಿ ಎನ್ ಓ 3458 ನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-28 ಎಂದು, ದಾವಾ ಸ್ವತ್ತಿನ ಕುರಿತು ದಿಃ 23-10-2003 ರಂದು ಆದ ಖರೀದಿ ಪತ್ರವನ್ನು

ಹಾಜರುಪಡಿಸಿದ್ದು, ಅದನ್ನು ನಿಡಿ-29 ಎಂದು, ಹಕ್ಕು ಬದಲಾವಣೆ ಪತ್ರ ನಂಬರ 27/ಸಿ ಎನ್ ಓ 10287 ನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-30 ಎಂದು, ದಾವಾ ಸ್ವತ್ತಿನ 2012-2013 ನೇ ಸಾಲಿನ ಫಾರ್ಮ ನಂಬರ 3 ಹಾಜರುಪಡಿಸಿದ್ದು, ಅದನ್ನು ನಿಡಿ-31 ಎಂದು, ನನ್ನ ಹೆಸರಿನಲ್ಲಿರುವ ದಾವಾ ಸ್ವತ್ತಿನ ಗಣಕೀಕೃತ ಉತಾರವನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-32 ಎಂದು, ದಾವಾ ಸ್ವತ್ತಿನ ಕುರಿತು ಕಂದಾಯ ಕಟ್ಟಿರುವ 9 ರಸೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಡಿ-33 ರಿಂದ ನಿಡಿ-41 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದು ಸಮಯವಾಕಾಶ ನೀಡಿ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.